

ಯಾರ ಜಪ್ತಿಗೂ ನಿಲುಕಿಲ್ಲ ಎಂಬುದು ಸತ್ಯ! ಯೌವನದಲ್ಲಿ ಅವಳು ಹೊಮ್ಮಿಸಿದ ಭಾವನೆಗಳು, ಇಷ್ಟು ವರ್ಷಗಳ ನಂತರವೂ ಎದೆಯಲ್ಲಿ ಹೂವಾಡಿಸಿದಂತಾಗುವುದರ ಬಗ್ಗೆ ಹೊಸಬಣ್ಣ ಯೋಚಿಸುವುದಿದೆ. ಈಗಲೂ ತನ್ನ ಕಾವ್ಯ ಕೃಷಿಗೆ ನಾಗರತಿಯೇ ಸ್ಫೂರ್ತಿ ಎಂಬುದು ಅವನ ಅಚಲ ನಂಬಿಕೆ. ನಾಗರತಿಯನ್ನೊಮ್ಮೆ ಭೇಟಿ ಮಾಡಬೇಕು ಎಂಬ ಆಸೆ ಬಹಳ ಹಳೆಯದು. ಅವಳನ್ನು ಮುಖಾಮುಖಿಯಾಗುವ ಕ್ಷಣವು, ಕಾಲೇಜು ದಿನಗಳ ಆ 'ರತಿಕಾಲ'ದೊಂದಿಗೆ ಹೇಗೆ ಅನುಸಂಧಾನಗೊಳ್ಳುವುದು ಎಂಬುದರ ಬಗ್ಗೆ ಕಥೆಗಾರನಾಗಿ ಅವನಿಗೆ ಕುತೂಹಲವೂ ಇತ್ತು. ಅತಳ, ವಿತಳ, ಪಾತಾಳಲೋಕದಲ್ಲಿದ್ದರೂ ಹುಡುಕಿ ತೆಗೆವ ಟ್ವಿಟರು, ಫೇಸ್ಬುಕ್ಕಿನಂಥ ಸೋಷಿಯಲ್ ಮೀಡಿಯಾಗಳು ಬಂದ ಮೇಲೂ ನಾಗರತಿಯ ಸುಳಿವು ಸಿಕ್ಕಿರಲಿಲ್ಲ! ನಾಗರತಿ ಬಗ್ಗೆ ಪೋಸ್ಟ್ ಹಾಕುವಾಗ, ಬಹುಶಃ ಗ್ರುಪಿನಲ್ಲಿ ಯಾರಲ್ಲಾದರೂ ಮಾಹಿತಿ ಇದ್ದೀತು ಎಂಬ ಆಸೆಯೊಂದು ಹೊಸಬಣ್ಣನಲ್ಲಿ ಗುಪ್ತವಾಗಿತ್ತು!

'ನಮ್ಮ ಜನರೇಷನ್ ಲಕ್ಕೀ ಮಾರಾಯ. ಅಂಕೋಲೆಗೆ ನಾಗರತಿಯ ಆಗಮನ ಆಗದಿದ್ರೆ ನಮಗೆ ಯೌವನದ ಅರಿವೇ ಆಗ್ತಿರಲಿಲ್ಲ, ಅಲ್ವೇನ್ರೋ' ಅಂದ ಶಿಂಗನಮಕ್ಕಿ ಶಿವು.

'ಆದರೆ ಯೌವನದ ಭಾವನೆಗಳ ಅಭಿವ್ಯಕ್ತಿ ಸಾಧ್ಯವಾಗಿದ್ದು ದಿನಕರ ದೇಸಾಯಿಯವರ ಚುಟುಕಗಳಿಂದ' ಎಂದ ಹೊಸಬಣ್ಣ.

ಎಲ್ಲಾ ಮಾತುಗಳನ್ನು ಸಾಹಿತ್ಯದತ್ತ ಹೊರಳಿಸುವುದು ಅವನ ಚಾಳಿ.

'ದಿನಕರ ದೇಸಾಯಿಯವರು ನಮ್ಮ ಜನಾಂಗದ ಸಾಹಿತ್ಯಕ ಕಣ್ಣು ತೆರೆಸಿದವರು, ನಮ್ಮ ಯೌವನದ ಕನಸಿನ ಕಣ್ಣು ತೆರೆಸಿದ್ದು ನಾಗರತಿ' ಎಂದ ಶಿವು.

'ನಾಗರತಿ ನಮ್ಮ ಸ್ವಪ್ನಸ್ಖಲನದ ರತಿಯೂ ಹೌದು' ಎಂದು ಕಾರಿಬೈಲ ಕಾಂತ ಪೋಸ್ಟ್ ಮಾಡಿದ. ಎಲ್ಲರೂ ಬಿದ್ದು ಬಿದ್ದು ನಕ್ಕರು.

'ದಯವಿಟ್ಟು ಇಂಥ ಪೋಲಿ ಮಾತೆಲ್ಲ ಹಾಕಬೇಡಿ. ನಮ್ಮ ಮೊಬೈಲಿಗೆ ಮಕ್ಕಳೂ ಕೈ